

# ಮಂದಸ್ಮಿತೆ ವಹೀದಾ

ವನ್ಯಜೀವಿ ಛಾಯಾಗ್ರಹಣ, ಪೇಂಟಿಂಗ್, ನೃತ್ಯ, ಗಾಯನ, ಪ್ರವಾಸ – ಹಲವು ಹವ್ಯಾಸಗಳನ್ನು ಇಳಿವಯಸ್ಸಿನಲ್ಲೂ ಉಳಿಸಿಕೊಂಡು, ನಟಿಯಾಗಿ ಮಾಡಿದ ಸಾಧನೆಗೆ 85ರ ವಯಸ್ಸಿನಲ್ಲಿ ವಹೀದಾ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೆ ಭಾಜನರಾಗಿದ್ದಾರೆ.

■ ವಿಶಾಖ ಎನ್.

ಬರ್ಲಿನ್ ಚಲನಚಿತ್ರೋತ್ಸವಕ್ಕೆ 'ಸಾಹಿಬ್ ಬೀಬಿ ಔರ್ ಬೇಗಂ' ಹಿಂದಿ ಸಿನಿಮಾ ನಾಮನಿರ್ದೇಶಿತವಾಗಿತ್ತು. ಆ ಚಲನಚಿತ್ರೋತ್ಸವದ ನಿರ್ದೇಶಕರು ಆಗ ಒಂದು ಪ್ರಶ್ನೆ ಎತ್ತಿದ್ದರು. 'ನೀವು ಭಾರತೀಯರು ಸಿನಿಮಾದಲ್ಲಿ ಅದೇಕೆ ಪದೇ ಪದೇ ಹಾಗೆ ಕುಣಿಯುವಿರಿ?' ಎಂದು ಮುಖದ ಮೇಲೆ ವ್ಯಂಗ್ಯದ ಭಾವ ತುಂಬಿಕೊಂಡೇ ಕೇಳಿದ್ದರು. ಆಗ ಅವರಿಗೆ ಉತ್ತರ ಕೊಡುವ ಸಾಹಸ ಮಾಡಿದ್ದು ನಟಿ ವಹೀದಾ ರೆಹಮಾನ್.

'ನೃತ್ಯ ನಮ್ಮ ಸಂಸ್ಕೃತಿಯ ಭಾಗ. ಸಂತಸವಾದಾಗ ನಾವೆಲ್ಲ ಸಹಜವಾಗಿಯೇ ಕುಣಿಯುತ್ತೇವೆ. ಅದು ಸಶಕ್ತ ಅಭಿವ್ಯಕ್ತಿ' ಎಂಬ ಅವರ ಉತ್ತರ ನಿರ್ದೇಶಕರಿಗೇನು ತೃಪ್ತಿ ಕೊಡಲಿಲ್ಲ. 'ವೈದ್ಯರು, ಪೊಲೀಸರೆಲ್ಲ ಬೀದಿಗಿಳಿದು ನರ್ತಿಸುವುದು ಸಿನಿಮಾದಲ್ಲೂ ಅಸಹಜವೇ ಹೌದಲ್ಲವೆ' ಎಂದು ಅವರು ಇನ್ನೊಂದು ಪ್ರಶ್ನೆ ಸೇರಿಸಿದರು. ವಹೀದಾ 'ನಮ್ಮಲ್ಲಿ ಜನ ಸಿನಿಮಾದಲ್ಲೂ ಹಾಡು–ಕುಣಿತ ನೋಡಲು ಇಷ್ಟಪಡುತ್ತಾರೆ. ನಾನು ಮೊದಲೇ ಹೇಳಿದಂತೆ ಅದು ಪರಂಪರೆಯ ಭಾಗವಾಗಿದೆ. ಅದು ಇರಬೇಕು ಎಂದೇ ನಮ್ಮವರೆಲ್ಲ ಬಯಸುತ್ತಾರೆ. ಅದಕ್ಕೇ ಸಿನಿಮಾಗಳಲ್ಲಿ ಹಾಡುಗಳಿಗೆ, ಕುಣಿತಕ್ಕೆ ಅವಕಾಶ ಮಾಡಿಕೊಡುವ ಯೋಚನೆಯನ್ನು ಎಲ್ಲ ಚಿತ್ರ ನಿರ್ಮಾತೃಗಳೂ ಮಾಡುತ್ತಾರೆ.' ಚಿತ್ರೋತ್ಸವದ ನಿರ್ದೇಶಕರು ಇದಕ್ಕೂ ತಲೆ ಅಲ್ಲಾಡಿಸುತ್ತಾ ಸುಮ್ಮನೆ ಸಾಗಿದ್ದರು. ವಹೀದಾ ಮಾತ್ರ ಶಾಂತ ಮುಖದ ಮೇಲೆ ನಗುವನ್ನು ಕುಣಿಸುತ್ತಾ ನಿಂತಿದ್ದರು.

ನೃತ್ಯಕ್ಕೂ ವಹೀದಾ ಅವರ ಸಿನಿಮಾ ಬದುಕಿಗೂ ದೊಡ್ಡ ನಂಟು. ಅವರು ತಮಿಳುನಾಡಿನಲ್ಲಿ ಹುಟ್ಟಿದ್ದು; ಅದೂ ಮುಸ್ಲಿಂ ಕುಟುಂಬದಲ್ಲಿ. ತಂದೆ ಡಿಸ್ಟ್ರಿಕ್ಟ್ ಕಮಿಷನರ್. ಮೊದಲು ಜನಪದ ನೃತ್ಯ ಲಾಲಿತ್ಯಕ್ಕೆ ಮಾರುಹೋಗಿದ್ದ ವಹೀದಾ ಮನೆಯ ನಾಲ್ಕನೆಯ ಹೆಣ್ಣುಮಗಳು. ಯಾವುದನ್ನೇ ಕಲಿಯಲು ಮುಂದಾದರೂ ಅಪ್ಪ–ಅಮ್ಮ ಬೇಡವೆನ್ನುತ್ತಿರಲಿಲ್ಲ. ಒಮ್ಮೆ ಕಮಲ ಲಕ್ಷ್ಮಣ್‌ರ ಭರತನಾಟ್ಯವನ್ನು ನೋಡಿದ್ದೇ ವಹೀದಾ ಅವರಿಗೆ ಅದರ ಮೇಲೆ ಮೋಹ ಉಕ್ಕಿತು.

ಅಪ್ಪ ಹೈದರಾಬಾದ್‌ಗೆ ವರ್ಗಾವಣೆಯಾದರೂ ನೃತ್ಯಾಭ್ಯಾಸವನ್ನು ಬಿಡಲಿಲ್ಲ. ಅಮ್ಮನೂ ಮಗಳ ನೃತ್ಯದ ಉತ್ಕಟತೆಯನ್ನು ನೇವರಿಸುತ್ತಲೇ ಬಂದರು. ವೈದ್ಯೆಯಾಗಬೇಕು ಎನ್ನುವ ಕನಸನ್ನು ಕಟ್ಟಿಕೊಂಡಿದ್ದ ಹೊತ್ತಿನಲ್ಲೇ ತಂದೆ ದಿಢೀರ್ ಮೃತಪಟ್ಟರು. ಆಗ ವಹೀದಾ ಓದಿನ ಗುರಿಯಿಂದ ನೋಟ ಕಿತ್ತರು. ನೃತ್ಯವನ್ನು ಕಣ್ಣಿಗೊತ್ತಿಕೊಂಡರು. ಅಪ್ಪನ ಸ್ನೇಹಿತರೊಬ್ಬರು ಹೈದರಾಬಾದ್‌ನಲ್ಲಿ ಸಿನಿಮಾ ನಿರ್ಮಾಪಕರು. ಅವರನ್ನು ಭೇಟಿ ಮಾಡಿ, ಸಿನಿಮಾದಲ್ಲಿ ಅವಕಾಶ ಗಿಟ್ಟಿಸಿಕೊಳ್ಳಬೇಕೆಂದು ನಿರ್ಧರಿಸಿದರು. ಸಿಕ್ಕಿದ್ದು ಬಾಲನರ್ತಕಿಯಾಗಿ ಒಂದು ಜನಪದ ಗೀತೆಯಲ್ಲಿ ಕಾಣಿಸಿಕೊಳ್ಳುವ ಸಣ್ಣ ಅವಕಾಶ. ಅಕ್ಕಿನೇನಿ ನಾಗೇಶ್ವರರಾವ್ ನಾಯಕರಾಗಿದ್ದ ಸಿನಿಮಾ 'ರೋಜುಲು ಮರಾಯಿ'ಯಲ್ಲಿನ ಆ ಹಾಡನ್ನು ನೋಡಿಯೇ ಅಭಿಮಾನಿಗಳು ಹುಡುಗಿಗೆ ಫಿದಾ ಆದರು.

'ರೋಜುಲು ಮರಾಯಿ' ತೆರೆಕಂಡಾಗಿನ್ನೂ ವಹೀದಾಗೆ 17 ವರ್ಷ. ಆ ಸಿನಿಮಾ ಸಿಲ್ವರ್ ಜ್ಯುಬಿಲಿ ಸಮಾರಂಭದ ಅಲೆಗಳು ಏಳುತ್ತಿದ್ದ ಹೊತ್ತಿನಲ್ಲೇ ಹಿಂದಿ ನಿರ್ದೇಶಕ ಗುರುದತ್ ಕಿವಿಗೆ ತೆಲುಗಿನ ಈ ನೃತ್ಯ ಲಾಲಿತ್ಯದ ಪ್ರತಿಭೆಯ ಹೆಸರು ಬಿದ್ದಿದ್ದು. ಕಣ್ಣಲ್ಲೇ ಅವರು ಹುಡುಗಿಯ ಪ್ರತಿಭೆಯನ್ನು ಅಳೆದರು. ಸ್ಕ್ರೀನ್ ಟೆಸ್ಟ್‌ಗೆ ಕರೆದರು. ಹುಡುಗಿ ಸುಲಭವಾಗಿ ಒಪ್ಪಲಿಲ್ಲ. ಅಮ್ಮನಿಗೂ ಸಿನಿಮಾ ಅಂದರೆ ಭಯವಿತ್ತು. ಇಷ್ಟವಾದ ಬಟ್ಟೆಯನ್ನಷ್ಟೆ ಹಾಕುವುದಾಗಿ ಕರಾರನ್ನು ಮುಂದಿಟ್ಟು, ಅದಕ್ಕೆ ಪಟ್ಟುಬಿದ್ದೇ ಒಪ್ಪಂದಕ್ಕೆ ವಹೀದಾ ಸಹಿ ಹಾಕಿದ್ದು. ಮೂರು ಸಿನಿಮಾಗಳಲ್ಲಿ ನಟಿಸುವ ಅವಕಾಶವನ್ನು ನಿಕ್ಕಿ ಮಾಡಿದ ಒಪ್ಪಂದ ಅದು. ಮೂರರಲ್ಲಿ ಮೊದಲನೆಯದು 'ಸಿಐಡಿ'. ದೇವಾನಂದ್‌ಗೆ ಹೊಸಮುಖದ ಸುಂದರಿ ಜೋಡಿ. ನೃತ್ಯದ ಮೋಡಿ. ಜನರು ಹೊಸ ನಟಿಯ ತಲೆಯ ಮೇಲೆ ನಕ್ಷತ್ರ ಕೂರಿಸಲು ಇನ್ನೇನು ಬೇಕು?

ರಾತ್ರಿ 9 ಗಂಟೆಯ ನಂತರ ಶೂಟಿಂಗ್ ಇರಕೂಡದು. ಬೆಳಿಗ್ಗೆ ಬೇಕಾದರೆ ಏಳಕ್ಕೇ ಎದ್ದು ಸಿದ್ಧವಾಗಿ ಬರುವುದಾಗಿಯೂ ವಹೀದಾ ಕಂಡೀಷನ್ ಹಾಕಿದ್ದರು. 'ಮುಝೆ ಜೀನೇ ದೊ' ಹಿಂದಿ ಸಿನಿಮಾದ ಸಂಪೂರ್ಣ ಚಿತ್ರೀಕರಣ ಚಂಬಲ್ ಕಣಿವೆಯಲ್ಲಿ ಆಗಿತ್ತು. ಟೆಂಟ್‌ಗಳಲ್ಲಿ ವಾಸ ಮಾಡಿದ ಅನುಭವ, 'ಖಾಮೋಶಿ' ಸಿನಿಮಾ ಪಾತ್ರದ ಪರಕಾಯ ಪ್ರವೇಶ ಮಾಡಿ ಮಾಡಿ ಮನಸ್ಸು ಕೊನೆಕೊನೆಗೆ ಖಿನ್ನಗೊಂಡ ಸಂಕಟ, 'ಸೋಲ್ವಾ ಸಾಲ್' ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದಾಗ ಸಂಭವಿಸಿದ ಅಮ್ಮನ ದಿಢೀರ್ ಸಾವು ಎಲ್ಲವನ್ನೂ ವಹೀದಾ ಸಹಿಸಿಕೊಂಡರು. ಆ ಆಘಾತದಲ್ಲಿ ಸಿನಿಮಾಗೆ ಗುಡ್‌ಬೈ ಹೇಳಲು ಹೊರಟಿದ್ದರು. ಆಗ ದೇವಾನಂದ್ ಕಿವಿಮಾತು ಹೇಳಿ, ಚಿತ್ರರಂಗದಲ್ಲೇ ಉಳಿಸಿದರು.

'ಶಗುನ್' ಸಿನಿಮಾದ ಸಹನಟ ಶಶಿ ರೇಖಿ ಅವರನ್ನು ವರಿಸಿದ ವಹೀದಾ, 1970ರಲ್ಲಿ ಪೋಷಕ ಪಾತ್ರಗಳಲ್ಲೂ ಮಿಂಚಿದರು. 'ಚಾಂದಿನಿ', 'ಲಮ್ಹೆ', 'ರಂಗ್ ದೆ ಬಸಂತಿ' ತರಹದ ಪ್ರಯೋಗಶೀಲ ಸಿನಿಮಾಗಳ ಭಾಗವಾಗಿಯೂ ಉಳಿದರು.

'ಗೈಡ್', 'ರೂಪ್ ಕಿ ರಾಣಿ ಚೋರೋಂ ಕಾ ರಾಜಾ' ರೀತಿಯ ಸಿನಿಮಾಗಳಲ್ಲಿ ಮೋಡಿ ಮಾಡಿದ ವಹೀದಾ, ಸತ್ಯಜಿತ್ ರೇ ಅವರ ಬಂಗಾಳಿ ಸಿನಿಮಾಕ್ಕೂ ಒಪ್ಪಿದ್ದರು. ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಗಳು ಅವರಿಗೆ ಎಂದೋ ಒಲಿದಿದ್ದವು. ಈಗ ದಾದಾಸಾಹೇಬ್ ಪ್ರಶಸ್ತಿಯ ಕಿರೀಟ. ವಹೀದಾ ಮಂದಸ್ಮಿತ ಸುಂದರ ವದನ ಹಾಗೂ ಅವರ ಕಾಡುವ ನಯನಾಭಿನಯಕ್ಕೆ ಇನ್ನೊಂದು ಅರ್ಘ್ಯ.

ಪ್ರತಿಕ್ರಿಯಿಸಿ: feedback@sudha.co.in